

ಚಿತ್ರಗಳು: ಸೃಜನ್

ಚಿರಾಗ್, ನನಗಿಂತ ಇಪ್ಪತ್ತು ವಯಸ್ಸಿಗೆ ಚಿಕ್ಕವ; ನಲವತ್ತೈದರ ಸುಮಾರಿದ್ದೀತು. ನನ್ನಂತೆಯೇ ಆರ್ಕಿಟೆಕ್ಟು. ಇಬ್ಬರೂ ಹತ್ತಾರು ಕಾಲದ ಹಿಂದೆ, ಹತ್ತಾರು ಕಾಲಕ್ಕೆ, ಬೆಂಗಳೂರಿನಲ್ಲಿರುವ ಬಲು ದೊಡ್ಡ ಹೆಸರಿನ ಡಿಸೈನುಶಾಲೆಯಲ್ಲಿ ಕಲಿಸುತ್ತಿದ್ದವಾಗಿ ಇವೊತ್ತಿಗೂ, ಒಂದು ಸಮಕ್ಕೆ ನಮ್ಮ ನಡುವೆ 'ಓರಗೆ' ಅಂತಾಗಿಬಿಟ್ಟಿದೆ. ಏರ್ಪಟ್ಟಿದೆ. ಹಿರೀಕನೆಂಬ ಕಾರಣಕ್ಕೇನೋ, ನನ್ನನ್ನು 'ಗುರು' ಅಂತಲೇ ಬಗೆಯುತ್ತಾನೆ. ಕರೆಯುತ್ತಾನೆ. ಸಾಲದುದಕ್ಕೆ, ಅವನ ವಯಸ್ಸಿನಲ್ಲಿರುವಾಗ, ನಾನೂ, ಅವನು ಕಲಿಯುತ್ತಿದ್ದ ಡಿಸೈನ್‌ಸ್ಕೂಲಿನಲ್ಲಿ ಕಲಿಸುತ್ತಿದ್ದೆ. ಒಂದು ಸೆಮಿಸ್ಟರು ಅವನಿಗೂ ತರಪೇತಿ ಕೊಟ್ಟೆನೆಂದು ನೆನಪಿಸಿಕೊಳ್ಳುತ್ತಾನೆ. ನನಗಂತೂ ಜ್ಞಾಪಕವಿಲ್ಲ... ಇರಲಿ. ನಾನು ಬೆಂಗಳೂರು ಬಿಟ್ಟುಬಂದು ಹತ್ತಿರ ಹತ್ತಿರ ಹತ್ತು ವರ್ಷಗಳೇ ಆಗಿವೆ. 'ಸೀತಾನದಿ'ಯೆಂಬ ಊರೆನಿಸದ ಅಥವಾ ಊರೇ ಅಲ್ಲದ, ಹೆಚ್ಚೇನೂ ಜನವಸತಿಯಿಲ್ಲದ ಮಳೆಗಾಡಿನ ಈ ಕೊಂಪೆಯನ್ನು, ಬಿಟ್ಟರೂ ಬಿಡದೊಂದು ಕಾರಣದ ಮೇರೆಗೆ ನೆಚ್ಚಿಕೊಂಡಿದ್ದೇನೆ. ದಿಟದ ಸಲುವೇನೆಂದು ಮುಂದೆ ತಿಳಿಸುತ್ತೇನೆ.

ಹೀಗೆ, ಬೆಂಗಳೂರಿನ ಕೊಂಡಿ ಕಡಿದುಕೊಂಡು ಸುಮಾರು ವರ್ಷಗಳೇ ಆಗಿದ್ದರೂ, ಅಲ್ಲಿನ ಹತ್ತಾರು ಆರ್ಕಿಟೆಕ್ಟು ಗೆಳೆಯರು ಇವೊತ್ತಿಗೂ ನನ್ನೊಡನೆ 'ಫೋನೀಮೇಲು'ಗಳ ನಂಟುಳಿಸಿಕೊಂಡಿದ್ದಾರೆ. ಸಂಪರ್ಕದಲ್ಲಿದ್ದಾರೆ. ಅವರಿಗಿಂತ ನಾನೇ ಅವರನ್ನು ಹೆಚ್ಚು